# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 20.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಬಸವರಾಜು ಬಿನ್ ಲಿಂಗಪ್ಪ |
| ವರ್ಷ | 78 ವರ್ಷ |
| ಕೆಲಸ | ವ್ಯವಸಾಯ |
| ವಾಸ್ತವ್ಯ | ಅಳ್ಳೇನಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ.ಸಿ ಎಸ್ ಎ ರವರಿಂದ

ಅಳ್ಳೇನಹಳ್ಳಿಯಿಂದ ಪ್ರತಿವಾದಿ ಜಮೀನಿಗೆ ಹೋಗುವುದಕ್ಕೆ ರಸ್ತೆ ಇದೆ ಎಂದರೆ ಸರಿಯಲ್ಲ. ಅಳ್ಳೇನಹಳ್ಳಿಯ ಗ್ರಾಮ ನಕಾಶೆಯಲ್ಲಿರುವ ರಸ್ತೆಯ ಉತ್ತರಕ್ಕೆ ನಾನು ಮನೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿ. ಸದರಿ ಗ್ರಾಮ ನಕಾಶೆಯಲ್ಲಿರುವ ರಸ್ತೆಯ ದಕ್ಷಿಣಕ್ಕೆ ಪ್ರತಿವಾದಿಯ ಜಮೀನು ಇದೆ ಎಂದರೆ ಸರಿ. ನನ್ನ ಮನೆಯ ಬಾಗಿಲು ದಕ್ಷಿಣ ದಿಕ್ಕಿಗೆ ಇದೆ ಎಂದರೆ ಸರಿ. ಸದರಿ ನಕಾಶೆ ರಸ್ತೆಯಲ್ಲಿ ನಾವು ಓಡಾಡುತ್ತಿದ್ದೇವೆ ಎಂದರೆ ಸರಿ. ಸದರಿ ನಕಾಶೆ ರಸ್ತೆಯನ್ನು ವಾದಿ ಒತ್ತುವರಿ ಮಾಡಿ ಪ್ರತಿವಾದಿಯ ಓಡಾಟಕ್ಕೆ ತೊಂದರೆ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿ. ವಾದಿ ದಾವಾಸ್ವತ್ತಿನಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾಸ್ವತ್ತು ವಾದಿಗೆ ಸೇರಿದಲ್ಲ ಎಂದರೆ ಸರಿ. ವಾದಿ ದಾವಾಸ್ವತ್ತು ಸರ್ಕಾರಿ ರಸ್ತೆ ಅಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಈ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನಾನು ನನ್ನ ಬಾಬ್ತು ಮನೆ ಖಾತಾ ಸಂಖ್ಯೆ 25/30 ಸ್ವತ್ತಿನ ಮೇಲೆ Fullerton India Credit Co Ltd., ನಲ್ಲಿ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿ. ಸದರಿ ಮನೆಯಲ್ಲಿ ನಾನು ವಾಸ ಇದ್ದೇನೆ ಎಂದರೆ ಸರಿ. ಅಳ್ಳೇನಹಳ್ಳಿ ಗ್ರಾಮದಲ್ಲಿ ಮೇಲೆ ಹೇಳಿದ ಖಾತಾ ಸಂಖ್ಯೆ 25/30 ಹೊರುತಪಡಿಸಿ ಬೇರೆ

ಮನೆ ಇಲ್ಲ ಎಂದರೆ ಸರಿ. ಸದರಿ ನನ್ನ ಮನೆ ಪೂರ್ವ ಪಶ್ಚಿಮ– 33 ಅಡಿ, ಉತ್ತರ ದಕ್ಷಿಣ – 42 ಅಡಿ ಇದೆ ಎಂದರೆ ಸರಿ. ಸದರಿ ಮನೆಯನ್ನು ಅಡಮಾನ ಮಾಡಿ ಮೇಲೆ ಹೇಳಿದ credit company ಗೆ ಅಡಮಾನ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ನಾವು ಬರೆದುಕೊಟ್ಟಿರುವ ಅಡಮಾನ ಪತ್ರದಲ್ಲಿ ಸದರಿ ನಮ್ಮ ಮನೆಯ ಚಕ್ಕುಬಂದಿಯಲ್ಲಿ ದಕ್ಷಿಣಕ್ಕೆ ರಸ್ತೆ ಎಂದು ಬರೆದುಕೊಟ್ಟಿದ್ದೇವೆ ಎಂದರೆ ಸರಿ. ವಾದಿ ಹಾಗೂ ನನಗೆ ಬಹಳ ವಿಶ್ವಾಸ ಇದೆ ಎಂದರೆ ಸರಿ. ನನ್ನ ಹಾಗೂ ವಾದಿಯ ನಡುವೆ ವಿಶ್ವಾಸ ಇರುವುದರಿಂದ ನಾನು ಪ್ರತಿವಾದಿಗೆ ತೊಂದರೆ ಕೊಡಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

**ಓ . ಹೇ. ಕೇ. ಸರಿ. ಇದೆ**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is  cross examined by defendant counsel fully .

Defendant counsel prays time for cross of Pw2.

Call on.25.11.2024.